

ಆಂಡಾಳ್

# ತಿರುಪ್ಪಾವೈ

ಕನ್ನಡ ನೆರಳು

ಅಕ್ಕೈಯರ್

ವಿಶದವಾಕ್ ಪ್ರಕಾಶನ
ಮೇಲುಕೋಟೆ

**Andal's Thiruppavai**
**in Kannada Poetry**
**by ARAYAR**

Sponsored by
**Smt. Hema Iyengar**
**America**

REVISED
Sixth Edition : 1993

ಸಹಕಾರ
ನಲ್ಲಾರ್ ಚಕ್ರವರ್ತಿ ರಾಧಾ ಮತ್ತು
ಗೋಪಾಲ್
ದೇವಶಿಖಾಮಣಿ ಸಂಪತ್ಕುಮಾರನ್

ಬೆಲೆ : ಕಲಿತು ಕಲಿಸಿ, ಬೃಂದಗಾನಗೋಷ್ಠೀ ನಿರ್ಮಾಣ

## ಕೃತಜ್ಞತೆ

ಸಂಪತ್ತಿದಾನಿ ಶ್ರೀ ಉ॥ ವೇ॥ ಯೋಗಿ ರಂಗಪ್ರಿಯರೂ, ತಿರುಪ್ಪಾವೈಯ ರಸದೂಟವನ್ನು ಈಗಾಗಲೇ ಕನ್ನಡದಲ್ಲಿ ಬಹಳ ಬಡಿಸಿರುವ ಶ್ರೀ ರಘುಸುತರೂ ಮೆಚ್ಚಿದ ಈ ನನ್ನ ಕನ್ನಡ ತಿರುಪ್ಪಾವೈಗೆ ಮಹಾಽಽಶೀರ್ವಾದವನ್ನೂ, ಒಪ್ಪುವ ಮುನ್ನುಡಿಯನ್ನೂ ಕರುಣಿಸಿದ್ದಾರೆ.

ಆಂಗೀರಸ ಮಾರ್ಗಶಿರ
ಧನುರ್ಮಾಸ ತೇದಿ,
15-12-1992
ತಿರುನಾರಾಯಣಪುರಂ ಅರೈಯರ್

# ಮುನ್ನುಡಿ

ಭಾರತದ ತೆಂಕಣ ದಿಕ್ಕಿನಲ್ಲಿ ಹನ್ನೆರಡು ಮಂದಿ ಸಂತರು (ಆಳ್ವಾರರು) ಬಹಳ ಮುಖ್ಯರಾದವರು. ಈ ಮಹಾತ್ಮರಲ್ಲಿ ಆಂಡಾಳ್ ಕೂಡ ಒಬ್ಬಳು. ಗೋದಾದೇವಿ ಎಂದು ಕರೆಯಲ್ಪಡುವ ಈಕೆಯು ಶ್ರೀವಿಲ್ಲಿಪುತ್ತೂರಿನಲ್ಲಿ ದೇವಾಲಯದ ಮಾಲಾಕಾರರಾದ, ಹಿರಿಯ ಆಳ್ವಾರರಾದ ವಿಷ್ಣುಚಿತ್ತರಿಗೆ ತುಳಸಿ ತೋಟದಲ್ಲಿ ದೊರೆತವಳು. ಭೂಮಿಯಲ್ಲಿ ದೊರೆತದ್ದರಿಂದ ಈಕೆಯನ್ನು ವಿಷ್ಣುಚಿತ್ತರು ಭೂದೇವಿಯ ಅವತಾರವೆಂದೇ ನಂಬಿದರು, ಆ ಮಗುವನ್ನು ಸಾಕಿ, ದೊಡ್ಡವಳನ್ನಾಗಿ ಮಾಡಿದರು. ಸದಾ ಶ್ರೀಕೃಷ್ಣನ ನಾಮಸ್ಮರಣೆಯ ನಡುವೆ ಬೆಳೆದ ಆಕೆಗೆ ರಂಗನಾಥ ಶ್ರೀ ವಿಷ್ಣುವಿನ ನಾಮಸ್ಮರಣೆ ಜೀವಮಂತ್ರವಾಯಿತು. ದೊಡ್ಡ ಭಕ್ತೆಯಾಗಿ ಬೆಳೆದ ಈಕೆಯು ಭಗವಂತನನ್ನೇ ವಿವಾಹವಾಗುವುದಾಗಿ ಹಠ ಹಿಡಿದಳು. ಅಂತೆಯೇ ಶ್ರೀರಂಗದಲ್ಲಿನ ರಂಗನಾಥರೊಂದಿಗೆ ಈಕೆಯ ವಿವಾಹವನ್ನು ನೆರವೇರಿಸಿ, ವಿಷ್ಣುಚಿತ್ತರು ಧನ್ಯರೆನಿಸಿಕೊಂಡರು. ಈಕೆಯು ರಂಗನಾಥನಲ್ಲೇ ಐಕ್ಯಳಾದಳು.

ಈಕೆಯು ರಚಿಸಿರುವ 'ತಿರುಪ್ಪಾವೈ' ಕೃತಿಯು ತಮಿಳು ಸಾಹಿತ್ಯದಲ್ಲಿಯೇ ಏಕೆ ವಿಶ್ವ ಸಾಹಿತ್ಯದಲ್ಲಿಯೇ ಅತ್ಯುತ್ತಮವಾದ ಶ್ರೀಕೃಷ್ಣಪ್ರೇಮವನ್ನು ಸಾರುವ ಅಪರೂಪ ಕೃತಿಯಾಗಿದೆ.

ಶ್ರೀ ಕೃಷ್ಣನನ್ನು ಪಡೆಯಲು ಗೋಪಿಯರು ಕಾತ್ಯಾಯಿನೀ ವ್ರತವನ್ನು ಆಚರಿಸಿದರೆಂದು ಶ್ರೀಮದ್ಭಾಗವತದಲ್ಲಿ ಇದ್ದುದನ್ನು ಕೇಳಿ ಗೋದಾದೇವಿಯು ತಾನಿರುವುದೇ ಗೋಕುಲವೆಂದೂ, ತನ್ನ ಸ್ನೇಹಿತೆಯರೇ ಗೋಪಬಾಲೆಯರೆಂದೂ ಶ್ರೀವಿಲ್ಲಿಪುತ್ತೂರಿನ ಸ್ವಾಮಿಯೇ ಶ್ರೀಕೃಷ್ಣನೆಂದೂ ಭಾವಿಸಿ ಅದೇ ದುರ್ಗಾ ಕಾತ್ಯಾಯಿನೀರತಿ ವ್ರತವನ್ನು ಅನುಕರಿಸಿ ಶ್ರೀಕೃಷ್ಣನನ್ನು ಪಡೆಯಬೇಕೆಂದು ತೀರ್ಮಾನಿಸಿದಳು. ಅಂತೆಯೇ ವ್ರತಾಚರಣೆಯನ್ನು ಮಾಡಿ ಶ್ರೀರಂಗನಾಥನನ್ನೂ ಪಡೆದಳು. ತಾನು ಕೈಗೊಂಡ ವ್ರತವನ್ನು ಹಂತಹಂತವಾಗಿ ಹೇಗೆ ಪೂರೈಸಿದಳು ಎಂಬುದನ್ನು ಪದ್ಯಗಳ ರೂಪದಲ್ಲಿ ರಚಿಸಿದಳು. ಇದೇ 'ತಿರು' ಪವಿತ್ರ: 'ಪಾವೈ' ವ್ರತ. ವ್ರತ ಸಾಧನೆಗೂ ಇವು ಆಗತ್ಯವಾದ ಪದ್ಯಗಳಾಗುವಂತೆ ಮಾಡಿದ್ದರಿಂದ 'ತಿರುಪ್ಪಾವೈ' ಅನ್ವರ್ಥವಾಗಿದೆ.

ಶ್ರೀ 'ಅಯ್ಯಂಗಾರ್'ರವರು ತುಂಬಾ ಸೂಕ್ಷ್ಮವಾಗಿ ತಮಿಳಿನ ಸೊಗಸನ್ನು ದೂರ ಮಾಡದೆ, ಭಕ್ತಿಯನ್ನು ಕಡಿಮೆ ಮಾಡದೆ ತಿರುಪ್ಪಾವೈಗೆ ಕನ್ನಡ ಸಮಾಕ್ಷರಿಯನ್ನು ರಚಿಸಿದ್ದಾರೆ. ಪ್ರಾಸಬದ್ಧವಾಗಿ, ತಾಳಬದ್ಧವಾಗಿರುವ ಈ ನರಳು ಮೂಲ ಸತ್ವವನ್ನು ಕಾಪಾಡಿಕೊಳ್ಳುವುದರಲ್ಲಿ ಸಫಲವಾಗಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಸಂಗೀತ ನೃತ್ಯಗಳಿಗೂ ಈ ಕವನಗಳು ಅನುಕೂಲವಾಗಿವೆ.

ಶ್ರೀ 'ಅಯ್ಯಂಗಾರ್'ರವರ ಈ ಪ್ರಯತ್ನವು ವಿಶಿಷ್ಟವಾದುದು. ಮೂಲಕ್ಕೆ ಧಕ್ಕೆ ಬರದಂತೆ, ಅವರ ಸಾಹಿತ್ಯ ತಪಸ್ಸಿನ ಫಲವನ್ನೆಲ್ಲ ಧಾರೆ ಎರೆದು 'ಸಮಾಕ್ಷರಿ'ಯನ್ನು ಸೃಷ್ಟಿ ಮಾಡಿ, ಕನ್ನಡಿಗರೆಲ್ಲರಿಗೂ ತುಂಬಾ ಉಪಕಾರ ಮಾಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಈ ಸೇರ್ಪಡೆ ಶ್ಲಾಘನೀಯವಾದುದು.

"ರಘುಸುತ"

## ಗೋದಾ ವಂದನೆ

ರಾಗ- ಭೌಳಿ

ನೀಳೋತ್ತುಂಗ ಸ್ತನಗಿರಿ ತಟೀ ಸುಪ್ತ ಗೋವಿಂದನೇಳ್ಸಿ
ತನ್‌ಪಾರಾರ್ಥ್ಯಂ ಶ್ರುತಿ ಶತ ಶಿರಸ್ಸಿದ್ಧ ಮಧ್ಯಾಪಿಸುತ್ತಾ
ತನ್ನೆಂಜಲ್ ಸರ ನಿಗಡಿತನ್ ಭೋಗ ಸೇವೋತ್ಕಟೇಚ್ಛಾ,
ಗೋದಾ ತಾಯ್ಗೇ! ನಮಃವಿದುವಿದೋ ಮತ್ತೆ ಮತ್ತೆ ನಮೋಽಸ್ತು
ಹಂಸದ ಬಯಲ್ ಪುತ್ತೂರ್ ಆಂಡಾಳ್ ರಂಗಗೆ
ರಂಜಿಪ ಶ್ರೀ ‘ತಿರುಪ್ಪಾವೈ’ ಪಲ್‌ಪದ್ಯಂ ರಾಗದಿ
ಪಾಡಿಕೊಟ್ಟಳ್ಳಿ ನಲ್‌ಪಾಮಾಲೆ, ಪೂಮಾಲೆ
ಸೂಡಿಕೊಟ್ಟಳ್ಳಿ,—ಪೇಳಿವಳ
ಸೂಡಿಕೊಟ್ಟಾ ಸೋಡರ್ ಬಳ್ಳೀ ! ಪಳಿನೋಂಪಿಯುಂ
ಪಾಡರುಳ್ ಬಲ್ಲಾ ಪಲಬಳಿಯುಳೀ ! ನೀ ಸೋಱ
ವೇಂಕಟವರ್ಗೆನ್ನಂ ವಿಧಿಸೆಂಬೀ ಮಾತಂ
ಲಂಘಿಸದಂತೆ ನಾಪ್, ದಯೆಗೈ.

—ಪುಂಡರೀಕಾಕ್ಷರು (ಉಯ್ಯಕ್ಕೊಂಡಾರ್)

ಆಂಡಾಳ್ ತಿರುವಡಿಗಳೇ ಶರಣು



## ಹಾಡು–೧

ರಾಗ-ಭೌಳಿ ಆದಿತಾಳ

ಮಾರ್ಗಶಿರ್ ತಿಂಗಳ್ ಮತಿ ತುಂಬ್ ನಲ್ ನಾಳಲಲಾ !
ನೀರಾಡ್ವೇಕಿಹರ್ ಬನ್ನೀ ನೇರ್ಪೂಡವೆಯರೇ
ಶೀರ್‌ಹೊಂ ಗೋಕುಲ ಸಿರಿಕಿರಿ ಬಾಲೆಯರೇ
ಕ್ರೂರೇಲ್ ಸಾಹಸಿ ನಂದಗೋಪನಾ ಕುವರನ್
ಏರ್ ತುಂಬ್ ಕಣ್ಣಿನೆಶೋದೆಯ ಎಳೆಯಾಸಿಂಗನ್
ಕಾರೊಡಲ್ ಕೆಂಗಣ್ ರವಿ ಮದಿಮೀರ್ ಪೋಲ್ಮೊಗನ್
ನಾರಾಯಣನೇ ನಮಗೇ ಹರೆ ತರುವನ್
ಧಾರುಣಿ ಪೊಗಳ್ ಮುಳುಗಿ, ಕೇಳಿಮ್ ರತಿಯೇ.

## ಹಾಡು–೨

ರಾಗ–ವಸಂತ ಆದಿತಾಳ

ಜಗ ಬಾಳ್ವಿಯರೇ ! ನಾವೂ ನಮ್ ನೋಂಪಿಗೆ
ಗೈ ಗೆಲಸಗಳ್ ಕೇಳೀರೇ ! ಹಾಲ್ಗಡಲೊಳ್
ನಿಗ ಪವಡಿ ಪರಮನ ಅಡಿ ಪಾಡಿ
ಇಗೊ ನೆಯ್ಯುಣ್ಣೆವೈ ಪಾಲ್, ಪುಂಜಾನೇ ನೀರಾಡಿ
ಇಕ್ಕೆಳೆಯೆವು ಮೈ, ಪೂವಿಟ್ ಮುಡಿಯೆವು ನಾವ್
ಅಕೃತ್ಯಗೈಯ್ಯೆವು, ತೀಚಾಡಿ ಸೇರ್ ಪೇಳೆವೈ
ಬಿಕ್ಕೆಯುಂ ಮಾನಮುಂ ಸಾಕೆನು ಕೊಟ್ಟೊ ಮೌನಂ
ಸದ್ಗತಿಯೆಣ್ಣಿ ಸಂತಸಂ, ಕೇಳೆಮ್ ರತಿಯೇ.



## ಹಾಡು ೩

ರಾಗ–ಆರಭಿ ಆದಿತಾಳ

ಹೊಂಗೇರ್ ಲೋಕವನಳೆದುತ್ತಮನ್ ಪೇರ್ ಪಾಡಿ
ನಾವ್ಗಳ್ ನಮ್ ವ್ರತವ್ಯಾಜದಿ ಸೇರ್ ನೀರಾಡಲ್
ತೀಂಗಿಲ್ದಿಳೆಯೆಲ್ಲೂ ತಿಂಗಳ್ ಮೂ ಮಳೆ ಹುಯ್ದು
ಹೊಂಗೇರ್ ಕಿರಿಗೆನ್ನೆಲ್ ನಡು ಮೀನ್ ಹೊರಳುವೊಲ್
ಹೊಂಗುವಳೆಯ ಪೂ ನಿದ್ದಿಸೆ ಸಿರಿ ಬಂಡು,
ಕೊಂಕದೆ ಹೊಕ್ಕಿದ್ದು ಪೇರ್ ಗೆಚ್ಚಲ್ ಮುಟ್ಟಿ ಬಿಡಲ್
ಹೊಂಗೊಡ ತುಂಬುವ ಕೊಡುಗೈ ಪೇರ್ ಪಶುಗಳ್
ಇಂಗದ ಸಿರಿ ತುಂಬಿ, ಕೇಳೆಮ್ ರತಿಯೇ.

## ಹಾಡು ೪

ರಾಗ–ವರಾಳಿ ಆದಿತಾಳ

ಗುಂಡ್ ಮಳೆರಾಯಾ ! ಒಂದೂ ನೀ ಕೈ ಬೀಗದೆಯೇ
ಕಡಲೊಳ್ ಪೊಕ್ಕು ಮೊಗೆದಾರ್ಭಟಿ ಗೈದೇರಿ
ಅಂಡಗಳ್ ಕಾರಣ ನೊಡಲ್ ಪೋಲ್ ಮೈ ಕಪ್ಪಾಂತು
ಚೆಂಬಿರಿದೋಳ್ ಪದುಮನಾಭನಾ ಕೈಯ್ಯೊಳ್
ದುಂಡ್ ಚಕ್ರಂ ಪೋಲ್ ಮಿಂಚಿ, ಶಂಖಂ ಪೋಲ್ ನಿಂತದುರಿ
ತಡವಿಲ್‌ದೇ ಶಾರ್ಙ್ಗಂ ಒದ್ದಾ ಶರಮಳೆ ಪೋಲ್
ನಾಡೆಲ್ಲೂ ಬಾಳುವೊಲ್ ಹುಯ್ದೇ ಬಿಡು, ನಾವ್ಗಳೂ
ಆಡಲ್ 'ಮಾರ್ಗ್ಗಳಿ ನೀರ್' ಮುದಂ, ಕೇಳಿಮ್ ರತಿಯೇ.



## ಹಾಡು ೫

ರಾಗ–ಶ್ರೀರಾಗ ಆದಿತಾಳ

ಮಾಯಿಯಂ ನಿತ್ಯೋತ್ತರ ಮಧುರಾಧಿಪನಂ
ಪಾವನ ಪೇರ್‌ನೀರ್ ಯಮುನೇ ದಂಡೆಯನಂ
ಗೋವಳರ್ ಕುಲದೊಳ್ ತೋರ್ಮಣಿ ಬೆಳಕನಂ
ತಾಯ್ ಬಸಿರ್ ಬೆಳಕಂ ಗೈದಾ ದಾಮೋದರನಂ
ಪಾವನರ್ ಬಂದು ನಾವ್ ಮಡಿ ಪೂ ಹಾಕೆರಗಲ್
ಬಾಯಿಂ ಪಾಡಿ ಮನದಿಂ ಚಿಂಚಿಂತಿಸಲು
ಹಾಯ್ ಪಿನ್ ಪಾಪವೂ ಮುಂದೆ ಹೊಗನಿಂದಿಹವೂ
ತೀಯೊಳಗೂಬಾಗುಂ ! ಪೇಳ್, ಕೇಳಿಮ್ ರತಿಯೇ.

## ಹಾಡು–೬

ರಾಗ–ಶಂಕರಾಭರಣ ಮಿಃಶ್ರಛಾಪುತಾಳ

ಪಕ್ಷಿಯೂ ಕೂಗಿತು ಕಾಣ್ ! ಪಕ್ಷಿ ರಾಜನ್ ದೇಗುಲ—
ಬೆಳ್ಗರೆ ಶಂಖಾರ್ಭಟಿರವ ಕೇಳಲಿಲ್ಲವೇ ?
ಚಿಕ್ಕವಳೇ ! ಏಳ್, ದೆವ್ವಳ ಮೊಲೆ ನಂಜುಂಡು
ಠಕ್ಕು ಶಕಟನ್ ಕಟ್ಟಳಿವೊಲ್ ಕಾಲ್ಒದ್ದು
ಹಾಲ್ತೊರೆ ಹಾವೊಳ್ ಹಾಯ್ ಪವಡಿಹ ಬಿತ್ತನಂ
ಚಿತ್ತದಿಕೊಂಡು ಮುನಿಗಳೂ ಯೋಗಿಗಳೂ
ಚೊಕ್ಕನೆ ಯೆದ್ದು 'ಹರಿ' ಯೆಂಬಾ ಹಿರಿ ಸದ್ದು
ಹೊಕ್ಕೊಳಗಂ ತಣ್ಪೇರ್ಸಿ, ಕೇಳೆಮ್ ರತಿಯೇ.



## ಹಾಡು ೭

ರಾಗ–ಭೈರವಿ ಮಿಶ್ರಛಾಪುತಾಳ

'ಕೀಚ್ ಕೀಚ್' ಎಂದೆಲ್ಲೂ ಗೀಜಗ ಕಲೆಯುತಲಿ
ಕೂಜಿಪ ಮಾತುಲಿಯಂ ಕೇಳೆಯೊ ಹುಚ್ ಹೆಣ್ಣೇ !
ಕಾಸೂ ತಾಲಿಯೂ ಘಲುಘಲಿ ಕೈ ಸೋಕು
ವಾಸನೆ ಘಮ ಗುರುಳ್ ಗೋಪಿಯರ್ ಮಂತಿಂದ
ಘೋಷಿಪ ಮೊಸರ್ ದನಿಯುಂ ಕೇಳಲಿಲ್ಲವೇನೇ ?
ನಾಯಕಿ ಹೆಣ್ಣೇ ! ಚಿಣ್ಣೇ ! ನಾರಾಯಣನ್‌ಮೂರ್ತಿ
ಕೇಶವನ್ ಪಾಡಲೂ ನೀ ಕೇಳಿಯೇ ಕೆಡೆದಿಹೆ
ತೇಜೋವತಿ ! ತೆರೆಯೈ, ಕೇಳೆಮ್ ರತಿಯೇ

## ಹಾಡು ೮

ರಾಗ–ಧನ್ಯಾಸಿ — ಮಿಶ್ರಛಾಪುತಾಳ

ಮೂಡಲ್ ಬಾನ್ ಬೆಳ್ ಎಂದೆಮ್ಮ ಕಿರುಗರಿಕೆ ಮೇ
ಯ್ದಾಡಲ್ ಹರಗಿತು ಕಾಣ್ ! ಮಿಕ್ಕಾ ಚಿಳ್ಳೈಗಳುಂ
ಓಡಲೇ ಓಡುವರಂ ಓಡದವೊಲ್ ಕಾಯ್ದುನ್
ಕೂಗಲ್ ಬಂದು ನಿಂದಿಹೆವ್ವೈ, ಕೌತುಕವಾಂ
ತಾಡುವ ಬೊಂಬೇ ! ಏಳೇ, ಪಾಡೀ ಹರೆಗೊಂಡು
ವಾಜಿಯ ಬಾಯ್ ಪಳಿದನಂ ಮಲ್ಲಾರ್ದನನಂ
ಕೂಡುತ ನಾವ್ ದೇವಾಧಿದೇವನಂ ಸೇವಿಸಲ್
ಓಡಾSS ರೈದರುಳುವನ್, ಕೇಳೆಪ್ ರತಿಯೇ



## ಹಾಡು ೯

ರಾಗ–ಅಮೀರ್ ಕಲ್ಯಾಣಿ — ಆದಿತಾಳ

ಪಾವನ ಮಣಿಮಹಲ್ ಸುತ್ತಾ ಬೆಳಕುರಿಯೆ
ಧೂಪಂ ಘಮಿಸೆ ನಿದ್ರಾತಲ್ಪಂಮೇಲ್ ಕಣ್‌ಬೆಳೆ
ಮಾವನ್ಮಗಳೇ ! ಮಣಿಗದವಂ ತಾಳ್ ತೆರೆಯೈ
ಮಾಮೀ ! ಅವಳನ್ನೆಬ್ಬಿಸಿರಾ ? ನಿಮ್ಮಗಳ್ ತಾನ್
ಊಮೆಯೊ ? ವಾ ಕಿವುಡಿಯೊ ? ಬಳಲಿಹಳೋ?
ಕಾವಲ್ಕಟ್ಟಿಳೊ ? ಘನನಿದ್ರಾಮಂತ್ರಿತಳೋ ?
‘ಮಾ ಮಾಯಿಗ ಮಾಧವ ವೈಕುಂಠಾ’ ಎಂದೆಂದು
ನಾಮಂ ಪಲವುಂ ಪೇಳಿ, ಕೇಳೆಪ್ ರತಿಯೇ.

## ಹಾಡು ೧೦

ರಾಗ–ತೋಡಿ ಆದಿತಾಳ

ವ್ರತಗೈದೇ ಸೊಗಮುಣ್ಣುವ ಎಮ್ಮೊಡತೀ !
ಮಾತುಂ ತಾರರೋ ಬಾಗಿಲ್ ತೆರೆಯುದವರ್ ?
ನಲ್ತೊಳಸೀ ಮುಡಿ ನಾರಾಯಣನ್, ನಮ್ಮಿಂ
ನುತ, ಹರೆ ತರು ಪುಣ್ಯಾತ್ಮನಿಂ, ಹಿಂದೋರ್‌ನಾಳ್
ಮೃತ್ಯುವಿನ್ ಬಾಯ್ ಬಿದ್ದಾ ಕುಂಭಕರ್ಣನೂ
ಸೋತೂ ನಿನಗೇ ತಾನ್ ನೀಳ್ ನಿದ್ದೆಯ ತಂದನೋ !
ಅತ್ಯಾಲಸ್ಯಂ ಅಂತಿಹಳೇ ! ಸಿಗದೊಡವೇ !
ಸೂಕ್ತವನರಿತೇ ಬಾ, ಕೇಳಿವ್ ರತಿಯೇ.



## ಹಾಡು ೧೧

ರಾಗ–ಹುಸೇನಿ ಮಿಶ್ರ ಛಾಪುತಾಳ

ಕಡಸಾಕಳ ಮಂದೆಗಳ್ ಪಲ ಕರೆದು
ಕೇಡಿಗಳ್-ಬಲ ಬಡಿ ಸಾರಿ, ಕದನಂ ಗೈ
ತುಡುಗೊಂದಿಲ್ಲಾ ಗೋವಳರವರ್ ಪೊನ್ಬಳ್ಳೀ !
ಫಣಿ ಪೋಲ್‌ಕಟಿ ಪುತ್ತದಿ, ಬನಕೇಕೀ ! ಬಾ !
ಒಡನಾಡಿಗಳ್ ನೆಂಟರೂ ಎಲ್ಲರೂ ಬಂದುನ್
ಎಡೆ ಪೊಕ್ಕು, ಮುಗಿಲ್ಬಣ್ಣನ್ ಪೆಸರ್ ಪಾಡೆ
ಆಡದೆ ಅನ್ನದೆ ಸಿರಿ ಮೆರೆವೆಣ್ಣೇ ನೀ
ಕೆಡೆ ಪೊರುಳೇಕೇ ? ಓ ಕೇಳಿಮ್ ರತಿಯೇ.

## ಹಾಡು ೧೨

**ರಾಗ–ಕೇದಾರಗೌಳ** **ಆದಿತಾಳ**

ಅರಚೆಳಗರು ನೆನೆವೆಮ್ಮೆ (ವತ್ಸಕೆ) ಮರು
ಗಿರೆ ಕೆಚ್ಚಲ್ ತನ್ನಿಂದೇ ನಿಲ್ದೇ ಪಾಲ್ ಸೋರೆ, ತೊ–
ಯ್ವ್ದರೆ ಮನೆ ಕೆಸರ್ ಗೈ ನಲ್ ಸಿರಿಯನ್ ತಂಗೀ
ಶಿರ ಹನಿ ಬೀಳೆ, ನಿನ್ ಬಾಗಿಲ್ ತಂಡ್ಪಿಡಿದು
ಬರು ಮುನಿಸಿಂ ತೆನ್ ಲಂಕೇಶನಂ ಸಾಯಿಸ್ದ
ಉರಕಿನಿಯನಂ ಪಾಡಲೂ, ನೀ ಬಾಯ್ ತೆರೆಯೆ !
ಅರೆ ಇನ್ನಾದರೂ ಏಳ್, ಎಂತೀ ಹಿರಿ ನಿದ್ದೆ ?
ನೆರೆಹೊರೆ ಯರಿತಾಯ್ತೋ ! ಕೇಳೆಮ್ ರತಿಯೇ,



## ಹಾಡು ೧೩

**ರಾಗ–ಅಠಾಣಾ** **ಆದಿತಾಳ**

ಹಕ್ಕಿಯ ಬಾಯ್ ಸೀಳ್ದನಂ, ಜಿಗುಟಿದನಂ ಹೊಲ್
ರಕ್ಕಸನಂ, ಗಾನದಿ ಕೀರ್ತಿಸಿ ಪೋಗುತ
ಮಕ್ಕಳೆಲ್ಲರೂ ವ್ರತಕಣಂ ಹೊಕ್ಕರೆಲೇ !
ಚುಕ್ಕೆ ಬೆಳ್ಳಿ ಮೇಲೇರ್ತ್ತು, ಗುರು ಮುಳುಗಾಯ್ತ್ತು !
ಹಕ್ಕಿಯೂ ಚೆದುರಿತು ಕಾಣ್ ! ಹೂ ಹರಿಣಾಕ್ಷಿ !
ಹೊಕ್ಕೊಳ ಕೊಡೆದು ಛಿಲ್ ಛಿಲ್ ನೀರಾಡದೆಯೇ
ಮೆತ್ತೆಯೊಳ್ ಕೆಡೆದಿಹೆಯೋ ! ಕಂದಾ ನೀ ನಲ್ನಾಳ್
ಠಕ್ಕನುಬಿಟ್ಟೀ ಕಲೆ, ಕೇಳೆಮ್ ರತಿಯೇ

## ಹಾಡು ೧೪

ರಾಗ–ಆನಂದಭೈರವಿ

ಮಿಶ್ರಛಾಪುತಾಳ

ನಿವ್ ಹಿತ್ತಿಲ ಕಡೆ ತೋಟದ ಬಾವಿಯೊಳ್, ಸೌ–
ಗಂಧಿ ಬಾಯ್ಬಿಚ್ಚಿ, ನೈದಿಲೆ ಮುಚ್ಚಿತು ಕಾಣ್
ಕೆಂಗಲ್ ಪುಡಿಯುಡಿಗೆ ಬಿಳಿಪಲ್ ತವಸಿ
ತವರ್ ಸಿರಿದೇಗುಲಂ ಶಂಕರ್ಪಿಸಲ್ ಪೋಗುಗೆ
‘ಎಮ್ಮಂ ಮುನ್ನೆಳಿಪೆನ್’ ಎನು ಭಾಷೆಯನಿತ್ತಾ
ತುಂಬ್‌ಹೆಣ್ಣೇ ! ಏಳ್, ನಾಚದ ನಾಲಿಗೆಯುವಳೇ !
ಶಂಕೊಡು ಚಕ್ರಂ ಎತ್ತಿಹ ನಿಡುಗೈಯ್ಯನಂ
ಪಂಕಜಾಕ್ಷನಂ ಪಾಡಲ್, ಓ ಕೇಳಿವ್ ರತಿಯೇ



## ಹಾಡು ೧೫

ರಾಗ–ಬೇಗಡೆ

ಮಿಶ್ರಛಾಪು ತಾಳ

“ಎಲೆ ಎಳೆಗಿಳಿ ! ಇನ್ನೂ ಮಲಗಿಹೆಯಾ ?”
“ಛಿಲ್ ಎನಬೇಡಿ, ಪೂರ್ಣೆಯರೇ ! ಬರುತಿಹೆ.”
“ಬಲ್ ನಿನ್ ಕಟ್‌ವಾತುಗಳ್, ನಿನ್ ಬಾಯ್ ಪರಿಚಿತಂ.”
“ಬಲ್‌ಗಾತಿಯರ್ ನೀವೇ !–ನಾನೇ ತಾನ್ ಆಗಿರಲಿ !”
“ಹೊರ ಬಾ ಜವದಿಂ, ನಿನಗೇನ್ ಬೇರೊಡವೆ ?”
“ಎಲ್ಲರೂ ಬಂದರೋ ?” ಬಂದರು, ಬಂದೆಣ್ಣಿಸೈ.”
“ಬಲ್ಲಾನೆಯಂ ಕೊಂದಾ ವೈರಿಗಳ್‌ವೈರಹರನ್
ಬಲ್ಲಾಳ್ ಮಾಯಿಗನ್ ಪಾಡೆ,” ಕೇಳಿಮ್ ರತಿಯೇ

## ಹಾಡು ೧೬

ರಾಗ–ಮೋಹನ

ಆದಿತಾಳ

ನಾಯಕನಾಗಿ ನಿಂತಾ ನಂದಪ್ಪಗೆ ಸೇರ್ದಾ
‘ಕೋಯಿಲ್’ ಕಾಯುವನೇ, ಬಾವುಟ ತೋರ್ ತೋರಣ
ಬಾಗಿಲ್ ಕಾಯ್ವನೇ ! ಮಣಿಗದವಂ ತಾಳ್ ತೆರೆ
ಆಯರ್ ಕುವರಿಯರ್ ಸಲು ಮೋಳು ಕಿಂದರಿ–
ಮಾಯನ್ ಮಣಿಬಣ್ಣನ್ ನಿನ್ನೇ ನುಡಿದಿಹನ್ನೈ,
ಪಾವನರ್ ಬಂದೆವ್ವೈ ಸುಪ್ರಭಾತಂ ಹಾಡಲ್ಕೈ,
ಬಾಯಿಂ ಮುನ್ ಮುನ್ ತಡೆಯುದೇ ಪ್ರಭುವೇ ನೀ
ನೇಹಿಂಪ ನಿಲ್ಗದ ನೀಗೋ ! ಕೇಳಿಮ್ ರತಿಯೋ.



## ಹಾಡು ೧೭

ರಾಗ–ಕಲ್ಯಾಣಿ

ಆದಿತಾಳ

ಅಂಬರಮೇ ತಣ್ಣೀರನೇ ಶೋರೇ ಧರ್ಮಂ ಗೈ
ಎಮ್ಮೊಡೆಯಾ ನಂದಗೋಪಾ ! ಎದ್ದೇ ಬಿಡೆಲೋ
ಹಂಬೋಲ್ ಪೆಣ್ಣಲ್ಲರ ತಳಿರೇ ಕುಲಬೆಳಕೇ
ಎಮ್ಮೊಡತೀ ಯಶೋದೈ, ಅರಿವಂ ಅಡೆಯ್ಯೈ
ಅಂಬರ ನಡು ದಾಟೇರಿ ಜಗವಳೆದಾ
ನಂಬುವರ್ ದೇವನೇ ಮಲಗದೆ ಮೇಲೇಳ್ಳೈ
ಕೆಂಬೊನ್ ಗೆಜ್ಜೆಯು ಪದ ಸಿರಿ ಬಲದೇವಾ
ತಮ್ಮ, ನೀನೂ ಬಿಡೋ ನಿದ್ದೆ, ಕೇಳಿಮ್ ರತಿಯೋ.

## ಹಾಡು ೧೮

**ರಾಗ–ಸಾವೇರಿ** **ಆದಿತಾಳ**

ಸುರಿ ಮದ ಗಜಕೋಡದ ತೋಳ್ವಲನಾ
ಸಿರಿನಂದನ ಸೊಸೆ ಮಗಳೇ ಓ ನೀಳೇ
ಸರಿಪರಿಮಳಕುರಳೀ ! ತಡೆ ನೀಗೈ
ಸರಿದೆಲ್ಲೂ ಕೋಳಿ ಕೂಗಿದೆ ಕಾಣ್ ! ಜಾಜೀ ಹಂ
ದರ ಕೋಗಿಲೆವಿಂಡ್ ಬಲು ಸಲ ಕೂಗಿತ್ತೈ, ಅ
ಪ್ಪಿರು ಚೆಂಡ್ಪೆರಳೀ ! ನಿನ್ ಮೈದುನ ಹಾಸ್ಯಕೆ
ಸಿರಿದಾವರೆಗೈಯ್ಯಿಂ, ತುಂಬಳೆ ಯುಲಿವೋಲ್
ಸರಿ, ತೆರೆ ಮುದದಿಂ, ಓ ಕೇಳಿಮ್ ರತಿಯೇ.



## ಹಾಡು ೧೯

**ರಾಗ–ಶಹನ** **ಆದಿತಾಳ**

ನಂದಾ ಬೆಳಗಿರೆ ದಂತದ ಕಾಲ್ಕಟ್ಟಿಲ್ ಮೇಲ್
ಸ್ಪಂಜಿನು ಐಗುಣ ಶಯನಂ ಮೇಲೇರಿ
ಕೊಂತಲರ್ ಪೂಗುರುಳ್ ನೀಳೆಯ ಎದೆ ಮೇಲ್
ಇಂಬಿಟ್ ಕೆಡೆದರಳೆದೆಯಾ ! ಬಾಯ್ತೆರೆಯಾ !
ಅಂಜನ ಬಿರಿಗಣ್ಣೀ ! ನೀ ನಿನ್ನಿನಿಯನಂ
ಒಂದಿನಿ ಹೊತ್ತೂ ನಿದ್ದೆಯಿಂದೇಳಲ್ಬಿಡೆ ಕಾಣ್ !
ಒಂದಿನಿತೂ ಪಿರಿವಂ ಸಹಿಸೆಯಲ್ಲಾ !
ಇಂತಲ್ ತತ್ವಂ, ತಕ್ಕುದೂ, ಕೇಳಿಮ್ ರತಿಯೇ.

## ಹಾಡು ೨೦

**ರಾಗ–ಝಂಝೂಟಿ** **ಮಿಶ್ರ ಛಾಪುತಾಳ**

ಮೂವತ್ತೂರ್ವಗೆ ಯಮರರ್ಗ್ಗೆ ಮುನ್ ಸಂದು
ಗಾಯಂ ತೀರಿಪ ಕಲಿಯೇ ! ನಿದ್ದೆಯಿಂದೇಳ್,
ಭಾವದಿ ಸರಳಾ ! ತಿರಳಾ ! ರಿಪುಗಳ್ಗೆ
ಆಪನ್ನೀಡುವ ವಿಮಲಾ ! ನಿದ್ದೆಯಿಂದೇಳ್
ಹಾವದ ಮೆಲ್ಲೆದೆ ! ಕೆಂದುಟಿ ! ತನುಕಟಿ !
ನಾಯಕಿ ನೀಳೇ ಸಿರಿಯೇ ! ನಿದ್ರೆಯಿಂದೇಳ್
ಚಾಮರ ಕನ್ನಡಿ ತಂದು, ನಿನ್ನಿನಿಯನಂ
ಈಗಲೆ ಯೆಮ್ ನೀರಾಡ್ಸೇ ! ಕೇಳೆಮ್ ರತಿಯೇ.



## ಹಾಡು ೨೧

**ರಾಗ–ನಾದನಾಮಕ್ರಿಯೆ** **ಮಿಶ್ರ ಛಾಪುತಾಳ**

ಎತ್ತಿಟ್ ಪಾತ್ರೆಗಳ್ ಮೇಲ್ ಹೋಗಿ ಹೊರಚೆಲ್ವೊಲ್
ಒತ್ತಟ್ಟೇ ಪಾಲ್ ಸೋರಿಪ ಉದಾರ ಪೇರ್ ಹಸುಗಳ್
ದಟ್ಟನೆ ಪೊಂದಿಹನ್ಮಗನೇ ! ಎಚ್ಚರ ಗೋಳ್
ಗಟ್ಟಿ ಪ್ರಮಾಣಾ ! ಹಿರಿಯಾ ! ಲೋಕದೊಳ್, ಪೈ
ಪೆತ್ತಿಹ ನಿಲ್ ಸೊಡರೇ ! ನಿದ್ದೆಯ ಬಿಟ್ಟೇಳ್
ಶತ್ರುಗಳ್ ನಿನ್‌ಬಲಕೇ ಸೋತುನ್ ಬಾಗಿಲೆಡೆ
ಒತ್ತಡದಿಂ ಬಂದುನ್ನಡಿಗೆರಗುವೊಲ್ ನಾವ್
ಅರ್ಥಿಸಿ, ಬಂದೆವ್ ಪೊಗಳ್ದೇ ! ಕೇಳೆಮ್ ರತಿಯೇ.

## ಹಾಡು ೨೨

ರಾಗ–ಯಮನ್ ಕಲ್ಯಾಣಿ — ಮಿಶ್ರಛಾಪುತಾಳ

ಚೆಂದೆಡೆ ಮಾಜಗದರಸರ್ ಅಭಿಮಾನ
ಭಂಗಮಾಂತು ಬಂದುನ್ ಸಜ್ಜೇ ಮಂಚದ ಕೀಳ್
ಸಂಘಂ ಇರುವವರೊಲ್ ಬಂದೆರಗಿದೆವ್ವೈ
ಕಿಂಕಿಣಿ ತೆರ ಬಾಯ್ಬಿರಿ ತಾವರೆ ಪೂಪೋಲ್
ಕೆಂಗಣ್ ಕಿರಿಕಿರಿದೇ ಎಮ್ಮೇಲ್ ಬೆಳಗವೋ !
ತಿಂಗಳುಮಾದಿತ್ಯನುಂ ಉದಿಸಿರುವಂತೇ
ಅಂಗಣ್ಣಿರಡುಂ ಕೊಂಡೆಮ್ಮೇಲ್ ದಿಟ್ಟಿಸಿದಲ್ಲಿ
ಎಂಗಳ್ಮೇಲ್ ಶಾಪಂ ಪೋಗುಂ, ಕೇಳೆಮ್ ರತಿಯೇ.



## ಹಾಡು ೨೩

ರಾಗ–ಪುನ್ನಾಗವರಾಳಿ — ಆದಿತಾಳ

ಮಳೆಗಾಲಂ ! ಮಲೆಗುಹೆ ! ತೆಕ್ಕೆಯೊಳ್ ನಿದ್ರಾ
ಕಲಿ ಕೇಸರಿ ಜಾಗೃತನ್, ಉರಿಕಾರುತ
ಪರಿಮಳೆ ನವಿರ್ ಹೋಗೆಲ್ಲೂ, ಚಾಚೊದರ್, ಮೈ
ಮುರಿ, ನಿಮಿರಿ, ಮೊಳಗುತ ಪೊರಮಟ್ಟು
ಬರುಪೋಲೇ ನೀ ಯುಗಸೇ ಪೂ ಬಣ್ಣಾ ! ನಿನ್ ಮಂ
ದಿರದಿಂ ಇಲ್ಲೇ ಬಂದುರುಳಿ, ಘನತೆಯ
ಸಿರಿ ಸಿಂಹಾಸನವೇರಿರುತ, ನಾವ್ ಬಂದಾ
ಕರುಮಂ ಆರ್ವೈಯ್ದುರುಳ್ ! ಕೇಳೆಮ್ ರತಿಯೇ

## ಹಾಡು ೨೪

**ರಾಗ–ಕುರಂಜಿ** **ಖಂಡಛಾಪು ತಾಳ**

ಅಂದೀ ಜಗವಳೆದೆ, ಅಡಿ ಬಾಳಲಿ !
ಸಂದಲ್ ತೆನ್‌ಲಂಕೆಯ ಸುಟ್ಟೆ ! ಬಲ ಬಾಳಲಿ !
ಭಂಜಿಸೆ ಶಕಟಂ ಒದ್ದೆ ! ಪೊಗಳ್ ಬಾಳಲಿ !
ವಂಚಕ ಕರುಗವಣ್ ಬೀರ್ದೆ, ತಾಳ್ ಬಾಳಲಿ !
ಹೊಂಬೆಟ್ಟಂ ಕೊಡೆಯೆತ್ತಿದೆ, ಗುಣ ಬಾಳಲಿ !
ಭಂಡ್ತನಂ ಗೆಲ್ದಳಿಪುನ್ ಕೈಯೋಳ್ ವೇಲ್ ಬಾಳಲಿ !
ಎಂದೆಂದುನ್ ಗೆಲ್ಮೆಯೇ ನುತಿಸಿ, ಹರೆಗೊಳ್ಳಲ್
ಇಂದು ಬಂದೆವ್ ನಾವ್, ಉರುಗೋ ! ಕೇಳೆಮ್ ರತಿಯೇ



## ಹಾಡು ೨೫

**ರಾಗ–ಬೇಹಾಗ್** **ಆದಿತಾಳ**

ಒಬ್ಬಳ ಮಗನಾಗುದಿಸೊಂದಿರುಳೊಳ್, ಮ
ತ್ತೊಬ್ಬಳ್ ಮಗನಾಗವಿತದೊ ಬೆಳೆಯೆ
ಅಬ್ಬಾ ! ಸಹಿಸದೆ ತಾ ಕೇಡಂ ನೆನೆದಾ
ಒಳ್ಪಿಗೆ ಹುಸಿ ಗೈದು ಕಂಸನ್ ಹೊಟ್ಟೆಯೊಳ್
ಬೆಂಬೆಂಕಿಯೊಲ್ ನಿಂತಾ ನಿಡು ನೇಹೀ ! ನಿನ್ನಂ
ಬೆಂಬೇಡುತ ಬಂದೆವೈ, ಹರೆ ತರುವಲ್ಲಿ
ಸಂಪದ್ಯುಕ್ತಂ ಸಿರಿಯುಂ ಬಲವುಂ ನಾವ್ ಪಾಡಿ
ಬೆಂಬುಳಿ ತೀರ್ದ್ದುಲ್ಲಸಂ ! ಕೇಳೆಮ್ ರತಿಯೇ.

## ಹಾಡು ೨೬

**ರಾಗ–ಕುಂತಲವರಾಳಿ** **ಆದಿತಾಳ**

ಮಾಲೇ ! ಮಣಿವಣ್ಣಾ ! ಮಾರ್ಗಳಿ ನೀರಾಡಲ್
ಮೇಲವರ್ ಗೈಯಲ್ ತಕ್ಕವ್‌ಗಳ ಕೇಳಲ್ಕಿರೆ ನೀ
ಈ ಲೋಕಂ ಎಲ್ಲಾ ನಡುಗಿಸಿ ಮೊಳಗುಂ
ಪಾಲ್‌ಪೋಲ್ವಣ್ಣದ ನಿನ್ ಪಾಂಚಜನ್ಯವನೇ
ಪೋಲುಂ ಶಂಖಗಳ್ ಹಿರಿಯೊಡೆಯುಳ್ಳವನೇ
ಭಾಳ ಹಿರಿ ಹರೆ ಶುಭಗಾಯಕರನ್ನೇ
ಮೇಲ್ ದೀಪಮೇ ಧ್ವಜವನ್ನೇ, ಮೇಲ್ಕಟ್ಟನ್ನೇ
ಆಲಿಲೆನೆಲೆಯಾ ! ಅರುಳ್ ! ಕೇಳಿಮ್ ರತಿಯೇ



## ಹಾಡು ೨೭

**ರಾಗ–ಪೂರ್ವಿಕಲ್ಯಾಣಿ** **ಆದಿತಾಳ**

ಕೂಡದವರುಂ ಗೆಲ್ಲುಣ ಗೋವಿಂದಾ ! ನಿನ್ನಂ
ಪಾಡಿ ಹರೆಗೊಂಡು, ನಾವ್ ಪಡೆ ಸನ್ಮಾನಂ
ನಾಡ್ ಪೊಗಳುಂ ಪರಿಸೆಯಿಂ ಚೆನ್ನಾಗಿಯೇ
ಸೂಡ್ ಕೈಬಳೆಯೇ ತೋಳ್ವಳಿ ಯೋಲೇ ಕಿವಿಪೂ
ಪಾಡೆಯೇ ಎಂಬಾ ಪಲ್ ತೊಡಿಗೆಯುಂ ತೊಟ್ಟೇವೈ
ಆಡೆಯುನುಟ್ಟೇವೈ, ಅದರ್ ಮೇಲ್ ಕ್ಷೀರಾನ್ನಂ
ಮೂಡುಪೊಲ್ ನೆಯ್ ಹುಯ್ದು ಮೊಳಗ್ಗೈ ಹರಿಪೊಲ್
ಕೂಡಿದ್ದೇ ನಾವ್ ಕುಳಿರ್ವೈ ! ಕೇಳಿಮ್ ರತಿಯೇ.

## ಹಾಡು ೨೮

**ರಾಗ–ಕಾಂಬೋಧಿ** **ಆದಿತಾಳ**

ಆಕಳ್‌ಪಿನ್ ಸಂದು ಕಾನನ ಸೇರುಣ್ಣೇವೈ !
ಏಕಜ್ಞಾನಮುಮಿಲ್ ಗೋಕುಲದೊಳು ನಿನ್ನಂ
ಹೀಗುದಿಸಿಹ ಪುಣ್ಯವ ನಾವ್ ಪಡೆದಿಹೆವೈ !
ಓ ಕೊರೆಯೋಂದಿಲ್ಲದ ಗೋವಿಂದಾ ! ನಿನ್ನೊಡನೇ
ಹೇಗೂ ನಂಟೆಮಗಿಲ್ಲಳಿಸಲ್ಕಳಿಯದೈ
ಈ ಕಿರಿಯರ್ ಅರಿವಿಲ್ಲದವರ್, ನೇಹದಿ ನಿನ್ನಂ
ಹಾ ! ಕಿರಿ ಪೇರ್ ಕರೆದುದ ಸೀರರುಳದೆಯೋ
ನೀ ಹಿರಿಯಾ ! ತಾ ಹರೆ, ಓ ಕೇಳೆಮ್ ರತಿಯೇ.



## ಹಾಡು ೨೯

**ರಾಗ–ಮಲಯ ಮಾರುತ** **ಆದಿತಾಳ**

ಶಿರು ಮುಂಜಾನೇ ಬಂದುನ್‌ಸೇವಿಸಿ, ನಿನ್ ಪೊನ್ನಾ-
ವರೆಯಡಿಗೇ ಶುಭ ಕೋರ್ವಾ ಹುರುಳ್ ಕೇಳಾ !
ಕರು ಮೇಯ್ಸುಣ್ಣುವ ಕುಲದೊಳ್ ನೀ ಪುಟ್ಟಿ
ಒಳವೂಳಿಗ ವೆಮ್ ಕೊಳ್ದೇ ಆಗದಲಾ !
ಹರೆಯಿದ ಕೊಳ್ಳಲ್ಕಲ್ಲವೋ ! ಗೋವಿಂದಾ
ಸರ್ವತ್ರೇಳೇಳ್ ಜನುಮಕೂ ನಿನ್ನೊಡೇ ನೇ-
ಟರೇ ಆದೇವೈ, ನಿನ್ಗೇ ನಾವಾಳ್ ಗೈದೇವೈ
ಮರು ನಮ್ಮಾಸೆಗಳ್ ಮಾರ್ರ್ರೋ ! ಕೇಳೆಮ್ ರತಿಯೇ.

## ಹಾಡು ೩೦.

ರಾಗ-ಸುರುಟಿ ಮಿಶ್ರಛಾಪುತಾಳ

ವಂಗಕ್ಕಡಲ್ ಕಡೆದಾ ಮಾಧವನಂ ಕೇಶವನಂ
ತಿಂಗಳ್ ಸಿರಿಮೊಗದೊಡವೆಯರ್ ಸಾರುತ ಬೇಡಿ
ಅಂದಲ್ಲಾss ಹರೆ ಗೊಂಡ್ ಪರಿಯುಂ ಅಣಿಪುತ್ತೂರ್
ಹೋಂಗಮಲದ ತಣ್ ಮಾಲೆ ಭಟ್ಟನಾಥನ್-ಗೋದೆ ಪೇಳ್ದ
ಸಂಘತ್ತಮಿಳ್ ಮಾಲೆ ಮೂವತ್ತುಂ ತಪ್ಪದೇ
ಇಂಬಿಲ್ಲೊರೆವವರ್ ಈರೀರ್ ಮಾಗಿರಿ ದೋಳನಿಂ
ಕೆಂಗಣ್ ಸಿರಿಮೊಗ ಚೆಲು ಸಿರಿರಾಯನಿಂ
ಎಂದೆಲ್ಲೂ ಸಿರಿಯರುಳ್ ಪೊಂದುಂಬರ್ ನಲಮೆಮ್ಪೋಲ್.

ಆಂಡಾಳ್ ಸಿರಿಯಡಿಗಳೇ ಶರಣು.

ತಿರುಪ್ಪಾವೈ ದಿವ್ಯಪ್ರಬನ್ಧವು ದ್ರಾವಿಡ ದಿವ್ಯಪ್ರಬನ್ಧಗಳ ಶಿರೋಮಣಿ. ಭಕ್ತಿಸರಸ್ವತಿಯ ಕಂಠಹಾರದ ನಾಯಕಮಣಿ. ಭಗವತೀ ಶ್ರೀ ಗೋದಾದೇವಿಯ ಅನುಭವಾಮೃತದ ನಿಷ್ಯಂದ. ಧರ್ಮಪ್ರಭುವೂ, ಪರಬ್ರಹ್ಮ ಪುರುಷೋತ್ತಮನೂ ಆದ ಶ್ರೀ ಗೋವಿಂದನ ತಾದಾತ್ಮ್ಯದಿಂದ ಕೂಡಿದ ಪಾರಾರ್ಥ್ಯ ಪರಿಪೂರ್ಣತೆಯಿಂದ ತಾನು ಎದ್ದು ಎಲ್ಲ ಜೀವಿಗಳನ್ನೂ ಏಳಿಸುತ್ತಿರುವ ಸುಪ್ರಭಾತ ಮಂಗಳ ವಾದ್ಯ ಘೋಷ, ಅಧ್ಯಾತ್ಮಶಾಸ್ತ್ರ ಕಾವ್ಯಗಳ ಸಾರ್ವಭೌಮ ಸಿಂಹಾಸನವನ್ನಲಂಕರಿಸಿರುವ ಭಗವದ್ಗೀತೆಯೊಡನೆ ಸಮಪೀಠದಲ್ಲಿ ಮಂಡಿಸಿರುವ ಭಗವತೀ ಗೀತೆ. ಆ ನಾಯಕಗೀತೆ ಮತ್ತು ಈ ನಾಯಕೀಗೀತೆ ಇವೆರಡೂ ತಮ್ಮ ಸರಳ ಸುಂದರ ಧ್ವನಿ ಪೂರ್ಣವಾದ ವಿಶಿಷ್ಟ ಶೈಲಿಗಳಿಂದ ಸಮಸ್ತ ವ್ಯಕ್ತಿ ಸರ್ವಜಗತ್ಕಲ್ಯಾಣಕ್ಕಾಗಿ ತತ್ಸಹಿತ ಪುರುಷಾರ್ಥಗಳ ದಿವ್ಯ ಸಂದೇಶಗಳನ್ನು ಸಾರುತ್ತಿವೆ.

ಶ್ರೀ ಅರ್ಯೈಯರ್ ಸ್ವಾಮಿಗಳ "ಇದು ವಿಶ್ವಮಾನವನ ಸಹಬಾಳ್ವೆಗೆ ಒಂದು ಸಾಮಾಜಿಕ ಭಾವನಾತ್ಮಕ ಹಾಗೂ ಕ್ರಿಯಾತ್ಮಕ ಕೈಪಿಡಿ. ಗ್ರಾಮ ಘಟಕಗಳ ಮತ್ತು ಪ್ರಶಾಂತವಿಶ್ವ ರಚನೆಯ ಸರಿಜೋಡಣೆಯಲ್ಲಿ ವೈಜ್ಞಾನಿಕ ಯುಗಧರ್ಮದ ಪ್ರೇರಕ ಈ ಕೃತಿ." ಎಂಬ ಹೇಳಿಕೆ ಇದರ ಮಹಿಮೆಯನ್ನು ಮತ್ತೂ ವಿಸ್ತಾರಪಡಿಸುತ್ತದೆ.

"ತಿರುಪ್ಪಾವೈ ನೆರಳು" ಎಂಬ ಅಂಕಿತವು ಶ್ರೀಕೋಶಕ್ಕೆ ಅತ್ಯಂತ ಅನ್ವರ್ಥವಾಗಿದೆ. ಇದು ತಿರುಪ್ಪಾವೈ ಬೆಳಕನ್ನೇ ಹಿಂಬಾಲಿಸಿ ಅಲ್ಲಿಯೇ ಲಯಹೊಂದಿಸುವುದರಲ್ಲಿ ಸಂದೇಹವಿಲ್ಲ.

ಶ್ರೀ ಶ್ರೀ ರಂಗಪ್ರಿಯ